ಫೈನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಆವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಜೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂಬರ್ 152. ತಾರೀಖು 17ನೇ ಏಪ್ರೆಲ್ ಸ್ಯ 1890ನೇ ಇಸವಿ.

ಸಕಲ ಜನಗಳಿಗೂ ತಿಳಿಯುವದಕ್ಕೋಸ್ಕರ ಇದರಿಂದ ಪ್ರಕಟಿಸಲ್ಪಡುವದೇನೆಂದರೆ,— ಕೊಲಾರ ಡಿಸ್ಟ್ರಿಕ್ಟಿಗೆ ಕೀರಿದ ಮಾಲೂರು ತಾಲ್ಲೂಕಿನ ರವಿನ್ಯೂ ಸರ್ವೆಸೆಟಿಲ್‌ಮೆಂಟ್ ಯಾನೆ ತರಮು ಜಮಾಬಂದಿ ಕೆಲಸವು ಸ್ಯ 1890ನೇ ಇಸವಿ ಮೇ 5ನೇ ತಾರೀಖಿನಲ್ಲಿ ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ರತರ್‌ಫರ್ಡ್, ಕರ್ನಲ್.
ಡೆಪ್ಯೂಟಿ ಸೂಪರಿಂಟೆಂಡೆಂಡ್ ರವಿನ್ಯೂ ಸರ್ವೆ.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 22ನೇ ಏಪ್ರೆಲ್ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ,— ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿ ಆದ ಇದರಡಿ ನಮೂದಿಸಿರುವ ಚೌಬೀನೆ ವಗೈರೆ ಸಾಮಾನು ಆಯಾ ಬಾಜುದಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ಮಾಡಲ್ಪಡುವ ಸ್ಥಳದ ಹೆಸರು.	ಹರಾಜು ತಾರೀಖು.	ತ್ಯಾಗದ ದೂಲಗಳು.	ಜಂಗಲಿ ದೂಲಗಳು.	ತ್ಯಾಗ ಮತ್ತು ಜಂಗಲಿ ಕಂಬಗಳು.	ಬೊಂಬುಗಳು.	ತ್ಯಾಗದ ಕಾಪಿ ಔಂಗ್ಸ್ ವ ಕೊಂಬೆ ಮರಗಳು.	ಪರಾ.
ಜೊನ್ನೇಗುಡ್ಡ ..	1890ನೇ ಇಸವಿ ಮೇ 10	..	..	...	..	328	ಮೊಬಲಗು ಪಾವತಿಮಾಡಿದ ತಾರೀಖು ಲಾಗಾಯ್ತು ಸಾಮಾನಿನ ಉಸ್ತುವಾರಿ ಬಂದೋಬಸ್ತು ಕ್ಕಾಯಕ್ಕೆ ತೆಗದುಕೊಂಡವರಿಗೆ ಕೀರಿಯಿರುತ್ತೆ.
ಚಂಪದಹಳ್ಳ ..	ಡಿಟೋ 12	..	..	..	..	1185	
ಟೀಕನಹಳ್ಳ ..	ಡಿಟೋ 22	..	..	..	..	1698	
ತರೀಕೆರೆ ಡಿಪೋ ..	ಡಿಟೋಜ್ಯೂ 5	...	70	250 ತ್ಯಾಗ	20,000	..	ಹೆಚ್ಚು ಕಡಮೆಯಾಗಿ
ಹೆಬ್ಬೇ ಡಿಪೋ ..	ಡಿಟೋ 10	150	100	...	..	..	
ಲಕ್ಕವಳ್ಳಿ ಡಿಪೋ ..	ಡಿಟೋ 16	600	200	150 ತ್ಯಾಗ 200 ಜಂಗಲಿ	..	..	